| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| **ಸಿ.ಸಿ. ನಂ.30/2022** | |
| **ಚಾಸಾ -5** | |
| **ಪ್ರಾಸಾ -4** | |
| ಸಾಕ್ಷಿದಾರರ ಹೆಸರು | ಹನಮಂತ ಮಾಳಿ |
| ತಂದೆ/ಗಂಡ/ತಾಯಿ ಹೆಸರು | ನಿಂಗಪ್ಪ |
| ವಯಸ್ಸು | **46** ವರ್ಷ |
| ಉದ್ಯೋಗ | ಒಕ್ಕಲುತನ |
| ವಾಸಸ್ಥಳ | ಸಾವಳಗಿ, ತಾಃ ಜಮಖಂಡಿ |

**ಸಾಕ್ಷಿಯನ್ನು ದಿನಾಂಕಃ-09-07-2024ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ದಿನಾಂಕ 03-03-2022 ರಂದು ನಾನು ಮತ್ತು ಚಾಸಾ-4ರವರು ರಸ್ತೆ ಮೇಲೆ ಹಾದು ಹೋಗುತ್ತಿದ್ದಾಗ, ಚಾಸಾ-1ರವರ ಅಂಗಡಿಯಲ್ಲಿ ಕಳ್ಳತನವಾಗಿದೆ ಎಂದು ಗೊತ್ತಾಗಿದೆ. ಸದರಿ ಅಂಗಡಿಗೆ ಹೋಗಿ ನೋಡಿದಾಗ, ಅಂಗಡಿಯ ತಗಡಿನ ಶೆಡ್ಡಿನ ಸ್ಕ್ರೂನ್ನು ತೆಗೆದಿದ್ದರು. ಚಾಸಾ-1ರನ್ನು ವಿಚಾರಿಸಿದಾಗ ಮೂರು ಮೋಟರಗಳು ಕಳ್ಳತನವಾಗಿವೆ ಎಂದು ಹೇಳಿದ್ದಾರೆ. ಚಾಸಾ-1 ಪ್ರಥಮ ವರ್ತಮಾನ ಹೇಳಿಕೆ ಕೊಡುತ್ತೇನೆ ಎಂದು ಹೇಳಿದ್ದಾರೆ. ಒಂದು ತಿಂಗಳು ಆದನಂತರ ಪೋಲಿಸ ಠಾಣೆಗೆ ನನ್ನನ್ನು ಕರೆದಿದ್ದರು. ಆಗ ನಾನು ಆರೋಪಿತರನ್ನು ಪೋಲಿಸ್ ಠಾಣೆಯಲ್ಲಿ ಕುಳಿತ್ತಿದ್ದರು ಅವರನ್ನು ಸರಿಯಾಗಿ ನೋಡಿಲ್ಲ. ಠಾಣೆಯಲ್ಲಿ ಮೂರು ಮೋಟರ್ ಪಂಪಸೆಟ್ ಇದ್ದವು. ಒಬ್ಬ ಆರೋಪಿ ಹೆಸರು ಹನುಮಂತ ಅಂತಾ ಹೇಳಿದ್ದಾರೆ, ಇನ್ನೊಬ್ಬನ ಅಡ್ಡಹೆಸರು ಗೋಲಬಾವಿ ಎಂದು ಹೇಳಿದ್ದಾರೆ. ಆರೋಪಿತರು ನನ್ನ ಮುಂದೆ ಏನು ಹೇಳಿಲ್ಲ.

**(ಈ ವೇಳೆಗೆ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದು, ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.)**

**ಪಾಟೀ ಸವಾಲುಃ- ಸ.ಸ.ಅ. ರವರಿಂದಃ-**

ದಿನಾಂಕ 02-03-2022 ರಂದು ರಾತ್ರಿ 8-30 ರಿಂದ ದಿನಾಂಕ 03-03-2022 ರ ಬೆಳಗಿನಜಾವಾ 5 ಗಂಟೆವರೆಗೆ ಕಳ್ಳತನ ಆಗಿದೆ ಎಂದು ಹೇಳಿದ್ದಾರೆ ಎಂದರೆ ಸರಿ. ಚಾಸಾ-1 ಅಂಗಡಿಯ ಮುಂದಿನ ಜಾಗವನ್ನು ಸ್ವಚ್ಛ ಮಾಡಲು ಹೋಗಿ ಒಳಗೆ ಹೋಗಿ ನೋಡಿದಾಗ ಕೌಂಟರ್ ಟೇಬಲ್ ಮೇಲೆ ಇದ್ದ ಒಂದು ಎಚ್ ಪಿ ಲಕ್ಷ್ಮೀ ಕಂಪನಿಯ ವಿದ್ಯುತ್ ಮೋಟರ

ಪಂಪ್ ಕಾಣಲಿಲ್ಲ, ಮತ್ತೇನು ಹೋಗಿವೆ ಎಂದು ನೋಡಿದಾಗ 5 ಎಚ್ ಪಿ ಓಪನ್ ವೀಲ್ ಇರುವ ಹಳೆಯ ವಿದ್ಯುತ್ ಪಂಪ್ ಮತ್ತು ಶಾರ್ಪ ಕಂಪನಿಯ 1 ಎಚ್ ಪಿ ಯ ಹಳೆ ವಿದ್ಯುತ್ ಪಂಪ್ ಕಾಣಲಿಲ್ಲ ಎಂದು ಹೇಳಿದ್ದಾರೆ ಎಂದರೆ ಸರಿ. ನಾನು ಠಾಣೆಗೆ ಹೋದಾಗ ಆರೋಪಿತರಿಗೆ ಸಂಬಂಧಪಟ್ಟಂತಹ ಎರಡು ದ್ವಿಚಕ್ರ ವಾಹನಗಳು ಇದ್ದವು ಎಂದರೆ ಸರಿ. ಆರೋಪಿತರನ್ನು ತೋರಿಸಿದಾಗ ಅವರನ್ನು ವಿಚಾರಿಸಿದಾಗ, 1ನೇ ಆರೋಪಿ 2ನೇ ಆರೋಪಿಯೊಂದಿಗೆ ಸೇರಿ ಎರಡು ದ್ವಿಚಕ್ರ ವಾಹನಗಳ ಮೇಲೆ ದಿನಾಂಕ 02-03-2022 ರಂದು ರಾತ್ರಿ 11-20 ಗಂಟೆಗೆ ಸಾವಳಗಿಗೆ ಬಂದು ಚಾಸಾ-1ರವರ ಅಂಗಡಿಯ ತಗಡು ಜೋಡಿಸಿದ ಸ್ಕ್ರೂಗಳನ್ನು ಸ್ಕ್ರೂಡ್ರೈವರನಿಂದ ತೆಗೆದು, ತಗಡನ್ನು ಬೆಂಡ್ ಮಾಡಿ ಹೋಲ್ ಮಾಡಿ, ಒಳಗೆ ಹೋಗಿ ಮೋಟರ್ ಪಂಪಗಳನ್ನು ಕಳ್ಳತನ ಮಾಡಿದ್ದಾಗಿ ನನ್ನ ಮುಂದೆ ಹೇಳಿದ್ದಾರೆ ಎಂದರೆ ಸರಿಯಲ್ಲ.

ಸದರಿ ಆರೋಪಿತರಿಗೆ ....... ಬಗ್ಗೆ ಹೇಳಿದರು ಎಂದು ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುವುದಿಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-16 ಎಂದು ಗುರುತಿಸಲಾಯಿತು. ಎಲ್ಲಾ ವಿಷಯಗಳು ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ವಕೀಲರಿಂದಃ-</u>**

ಚಾಸಾ-1 ನನ್ನ ಸ್ನೇಹಿತ ಎಂದರೆ ಸರಿ. ಚಾಸಾ-1ರವರ ಶೆಡ್ಡಿನ ಅಂಗಡಿಯ ಪೂರ್ವ ದಿಕ್ಕಿನ ಸ್ಕ್ರೂನ್ನು ಬಿಚ್ಚಿದ್ದರು. ಚಾಸಾ-1ರವರ ಅಂಗಡಿ ಪಶ್ಚಿಮ ಮುಖವಾಗಿ ಇದೆ. ಪೋಲಿಸರ ಮುಂದೆನಾನು ಹೇಳಿಕೆ ನೀಡಿಲ್ಲ ಎಂದರೆ ಸರಿ. ನಾನು ಠಾಣೆಗೆ ಹೋಗಿದ್ದೆ, ಠಾಣೆಯಲ್ಲಿ ಮೋಟರ್ ಪಂಪಗಳನ್ನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಮುಖಾಂತರ ಆರೋಪಿತರ ಹೆಸರು ಗೊತ್ತಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.

| | |
|---|---|
| **ಪ್ರಧಾನ ಹಿರಿಯ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ ಜಮಖಂಡಿ.** | |
| **ಸಿ.ಸಿ. ನಂ.30/2022** | |
| **ಚಾಸಾ -7** | |
| **ಪ್ರಾಸಾ -3** | |
| **ಸಾಕ್ಷಿದಾರರ ಹೆಸರು** | **ಪಡಿಯಪ್ಪ ವಾಲಿಕರ** |
| **ತಂದೆ/ಗಂಡ/ತಾಯಿ ಹೆಸರು** | **ಸತ್ಯಪ್ಪ** |
| **ವಯಸ್ಸು** | **34 ವರ್ಷ** |
| **ಉದ್ಯೋಗ** | **ಪೋಲಿಸ್ ಪೇದೆ, ಸಾವಳಗಿ ಪೋಲಿಸ್ ಠಾಣೆ** |
| **ವಾಸಸ್ಥಳ** | **ಸಾವಳಗಿ** |

**ಸಾಕ್ಷಿಯನ್ನು ದಿನಾಂಕಃ-09-07-2024ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಮುಖ್ಯ ವಿಚಾರಣೆಃ-ಸ.ಸ.ಅ ರವರಿಂದಃ-**

ನಾನು 2021 ರಿಂದ ಇಲ್ಲಿಯರವರೆಗೆ ನಾನು ಸಾವಳಗಿ ಪೋಲಿಸ್ ಠಾಣೆಯಲ್ಲಿ ಪಿ.ಸಿ. ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ 13-04-2022 ರಂದು ನಾನು ಮತ್ತು ಚಾಸಾ-8 ರವರು  ಗಸ್ತಿಗಾಗಿ ನೇಮಕಗೊಂಡಿದ್ದು, ಬಸ್ಟ್ಯಾಂಡಿನಿಂದ ತುಂಗಳ ರಸ್ತೆ ಕಡೆಗೆ ಹೋಗುತ್ತಿದ್ದೆವು. ಆ ಸಮಯದಲ್ಲಿ ಆರೋಪಿತರು ದ್ವಿಚಕ್ರ ವಾಹನದ ಮೇಲೆ ತುಂಗಳ ಕಡೆಯಿಂದ ಬಂದಿದ್ದಾರೆ. ಒಬ್ಬ ಆರೋಪಿ ದ್ವಿಚಕ್ರ ವಾಹನದ ಮೇಲೆ ಮೋಟರ್ ಪಂಪನ್ನು ತೆಗೆದುಕೊಂಡು ಬರುತ್ತಿದ್ದ. ಆತನನ್ನು ನಿಲ್ಲಿಸಿ ವಿಚಾರಿಸಿದ್ದೇವೆ. ಆರೋಪಿ ಕೇಳಿದ ತಕ್ಷಣ ಹೆದರಿಕೊಂಡಿದ್ದಾನೆ. ಆದ್ದರಿಂದ ನಮಗೆ ಅನುಮಾನ ಬಂದಿದೆ. ನಂತರ ಆರೋಪಿತರನ್ನು ನಮ್ಮ ಠಾಣೆಗೆ ಕರೆದುಕೊಂಡು ಹೋಗಿದ್ದೇವೆ. ಆರೋಪಿತರ ಹೆಸರು ಸದಾಶಿವ ಮತ್ತು ಹನುಮಂತ. ನಂತರ ಇಬ್ಬರು ಆರೋಪಿತರನ್ನು ಚಾಸಾ-9 ರವರ ಮುಂದೆ ಹಾಜರುಪಡಿಸಿದ್ದೇವೆ. ಚಾಸಾ-9 ರವರು ಆರೋಪಿತರನ್ನು ವಿಚಾರಿಸಿದ್ದಾರೆ. ಸದರಿಯವರು ಅಮರ್ ಎಲೆಕ್ಟ್ರಾನಿಕ್ ಅಂಗಡಿಯಿಂದ ಮೋಟರ್ ಕಳ್ಳತನ ಮಾಡಿದ್ದಾಗಿ ಹೇಳಿದ್ದಾರೆ. 1ನೇ ಆರೋಪಿ ಮೂರು ಮೋಟರಗಳನ್ನು ಕಳ್ಳತನ ಮಾಡಿಕೊಂಡು ಹೋಗಿ ತನ್ನ ತೋಟದ ಮನೆಯಲ್ಲಿ ಇಟ್ಟಿಕೊಂಡಿದ್ದಾಗಿ ಹೇಳಿದ್ದಾನೆ. ಒಂದನ್ನು ಮಾರಾಟ ಮಾಡಲು ಬಂದಾಗ ಸಿಕ್ಕಿದ್ದೇವೆ ಎಂದು ಹೇಳಿದ್ದಾನೆ. ಆ ದಿನ ಆರೋಪಿತರಿಂದ ಅಮಾನತ್ತುಪಡಿಸಿಕೊಂಡ ಮೋಟರ್ ಪಂಪನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಸದರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ-10 ಮತ್ತು ನಿಪಿ-11 ಎಂದು ಗುರುತಿಸಲಾಗಿದೆ.

**<u>ಪಾಟೀಸವಾಲುಃ 1ನೇ ಆರೋಪಿ ಪರ ಶ್ರೀ. ಎಸ್ ಸಿ ಕೆ  ವಕೀಲರಿಂದಃ-</u>**

ನಾನು ಯಾವ ಕರ್ತವ್ಯಕ್ಕೆ ನೇಮಕವಾಗಿದ್ದೆ ಎಂದು ನಮ್ಮ ಕಚೇರಿಯ ಚಲನವಲನ ರಜಿಸ್ಟರನಲ್ಲಿ ನಮೂದಾಗಿದೆ. ಆ ದಿನ ನಾನು ಮತ್ತು ಚಾಸಾ-8ರವರು ದ್ವಿಚಕ್ರ ವಾಹನದ ಮೇಲೆ ಗಸ್ತಿಗಾಗಿ ಹೋಗಿದ್ದೆವು. ಆ ದಿನ ನಾವು ಒಂದೇ ದ್ವಿಚಕ್ರ ವಾಹನದ ಮೇಲೆ ಹೋಗಿದ್ದೆವು. ಗಸ್ತಿಗಾಗಿ ನಾವು 24 ಹಳ್ಳಿಗಳಲ್ಲಿ ಎಲ್ಲಿ ಬೇಕಾದರು ಹೋಗಬಹುದು. ಸಾವಳಗಿ ಬಸ್ಸ್ಯಾಂಡಿನಿಂದ ಸುಮಾರು 200-300 ಮೀಟರನ ಒಳಗಡೆ ಆರೋಪಿತರು ಸಿಕ್ಕಿದ್ದಾರೆ. ಸ್ಥಳದಲ್ಲಿ ಆರೋಪಿತರನ್ನು ವಿಚಾರಿಸಿದ್ದೇವೆ, ಸದರಿಯವರು ಸರಿಯಾಗಿ ಉತ್ತರ ಕೊಡದೇ ಇರುವುದರಿಂದ ಚಾಸಾ-9 ರವರ ಕಡೆ ಕರೆದುಕೊಂಡು ಹೋಗಿದ್ದೇವೆ. ನಾವು ಸುಮಾರು 5 ನಿಮಿಷ ಅವರನ್ನು ವಿಚಾರಿಸಿದ್ದೇವೆ. ನಾನು ನೋಡಿದಂತಹ ಮೋಟರನ ಬಣ್ಣ ಕರಿ ಬಣ್ಣದಾಗಿತ್ತು. ಚಾಸಾ-9 ರವರು ಆರೋಪಿತರನ್ನು 15 ರಿಂದ 20 ನಿಮಿಷಗಳ ಕಾಲ ವಿಚಾರಿಸಿದ್ದಾರೆ. ನಾನು ಹೇಳಿಕೆಯನ್ನು ದಿನಾಂಕ 13-04-2022 ರಂದು ಸಂಜೆ 5 ಗಂಟೆಗೆ ಕೊಟ್ಟಿದ್ದೇನೆ. ಆ ದಿನ ನಾವು ಗಸ್ತಿಗೆ ಹೋಗಿದ್ದೆವು ಮತ್ತು ಆರೋಪಿತರನ್ನು ವಿಚಾರಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರೂ ಸಹ ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ</u>** 2ನೇ ಆರೋಪಿ ಪರ ವಕೀಲರು ಹಾಜರಿದ್ದು, ಮೇಲಿನ ಪಾಟೀಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**<u>ಮರುವಿಚಾರಣೆ: ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ. ಸರಿ ಅದೆ.

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.